ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1325**
ಸದಸ್ಯರ ಹೆಸರು	:	ಶ್ರೀ ಬಸವರಾಜ ಪಾಟೀಲ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	**23-09-2021**

ಕ್ರ.ಸಂ.	ಪ್ರಶ್ನೆಗಳು	ಉತ್ತರ
ಅ	ಮಾಧ್ಯಮ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಜಾಹೀರಾತು ನೀತಿ ಪರಿಷ್ಕರಣೆ ಮಾಡಲಾಗಿದೆಯೇ; ಹಾಗಿದ್ದಲ್ಲಿ ಯಾವಾಗ ನೂತನ ಜಾಹೀರಾತು ನೀತಿ ಜಾರಿಗೆ ತರಲಾಗುವುದು;	ಪ್ರಸ್ತುತ "ಜಾಹೀರಾತು ನೀತಿ-2013 - ಅನುಷ್ಠಾನ ನಿಯಮಗಳು - 2014" ನಿಯಮಗಳು ಜಾರಿಯಲ್ಲಿದ್ದು, ಸದರಿ ಜಾಹೀರಾತು ನೀತಿಗೆ ಪರಿಷ್ಕರಣಾ ಪ್ರಕ್ರಿಯೆ ಪ್ರಸ್ತುತ ನಡೆಯುತ್ತಿದ್ದು, ಶೀಘ್ರದಲ್ಲೇ ಪರಿಷ್ಕೃತ ಜಾಹೀರಾತು ನೀತಿಯನ್ನು ಜಾರಿಗೊಳಿಸಲಾಗುವುದು.
ಆ	ಪಿಡಿಎಫ್ ಮತ್ತು ಮುದ್ರಣವಾಗದೆ ಇರುವ ಪತ್ರಿಕೆಗಳ ಜಾಹೀರಾತು ನೀಡುವುದರಿಂದ ಆಗುವ ಆರ್ಥಿಕ ನಷ್ಟಕ್ಕೆ ಯಾರು ಹೊಣೆ;	ಪಿಡಿಎಫ್ ಮತ್ತು ಮುದ್ರಣವಾಗದೆ ಇರುವ ಪತ್ರಿಕೆಗಳು ಜಾಹೀರಾತು ಪಡೆಯಲು ಅರ್ಹವಿರುವುದಿಲ್ಲ ಹಾಗೂ ಇಲಾಖೆಯಿಂದ ಯಾವುದೇ ಜಾಹೀರಾತು ನೀಡುವುದಿಲ್ಲವಾದ್ದರಿಂದ ಆರ್ಥಿಕ ನಷ್ಟ ಉಂಟಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.
ಇ	ಮುದ್ರಣವಾಗದಿರುವ ಪತ್ರಿಕೆಗಳಿಗೆ ಜಾಹೀರಾತು ತಡೆಯಲು ಸರ್ಕಾರ ಕೈಗೊಂಡ ಕ್ರಮವೇನು?	ಜಾಹೀರಾತು ನೀತಿ-2013 ರನ್ವಯ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳು ಪ್ರತಿ ಮಾಹೆ ಕನಿಷ್ಟ 25 ಸಂಚಿಕೆಗಳನ್ನು ಹೊರತರಬೇಕು. ಕನಿಷ್ಟ 25 ಸಂಚಿಕೆಗಳನ್ನು ಹೊರತರದ ಪತ್ರಿಕೆಗಳನ್ನು ಮಾಧ್ಯಮಪಟ್ಟಿಯಿಂದ ಅಮಾನತ್ತಿನಲ್ಲಿಡಲಾಗುವುದು.

ಕೆಸಿಐ-ಪಿಐಪಿ/277/2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ